# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025.

**ನ್ಯಾಕ 'ಎ' ಶ್ರೇಣಿ ಮಾನ್ಯತೆ**

ದೂರವಾಣಿ ಸಂಖ್ಯೆ: 0836–2222392 ಜಾಲತಾಣ : www.kslu.karnataka.gov.in

ಫ್ಯಾಕ್ಸ್: 0836–2323151 ಇ ಮೇಲ್ : kslu.registrar@gmail.com


ಸಂಖ್ಯೆ: ಕರಾಕಾವಿ/ಆಡಳಿತ/2021–22/1793 ದಿನಾಂಕ: 01.02.2022

## ಸುತ್ತೋಲೆ

**ವಿಷಯ:** ವಿಶ್ವವಿದ್ಯಾಲಯದ 80–20 ಅಂಕ ಮಾದರಿಯ ವಿವಿಧ ಕಾನೂನು ಕೋರ್ಸುಗಳ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡುವ ಕುರಿತು.

**ಉಲ್ಲೇಖ:** 1. No. KSLU/Reg/Academic/2021-22/Internal Assesment 2018-19/1384 Dated: 21.08.2018.

2. 33ನೇ ಪ್ರಶಿಕ್ಷಣ ಪರಿಷತ್ ಸಭೆ ನಡಾವಳಿಗಳ ಕಲಂ ಸಂಖ್ಯೆ 3 ದಿನಾಂಕ: 23.12.2021.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 01.02.2022.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 80–20 ಅಂಕ ಮಾದರಿಯ ವಿವಿಧ ಕೋರ್ಸುಗಳಿಗೆ ಸಂಬಂಧಿಸಿದಂತೆ, ಉಲ್ಲೇಖ 01ರ ವಿಶ್ವವಿದ್ಯಾಲಯದ ಪತ್ರದ ಪ್ರಕಾರ ಆಂತರಿಕ ಅಂಕಗಳನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ ಕೆಲವು ಮಾದರಿ ವಿಧಾನಗಳನ್ನು ಉಲ್ಲೇಖಿಸಲಾಗಿರುತ್ತದೆ. ದಿನಾಂಕ: 23.11.2021ರ ಪ್ರಶಿಕ್ಷಣ ಪರಿಷತ್ ಸಭೆಯ ತೀರ್ಮಾನಕ್ಕೆ ಅನುಗುಣವಾಗಿ 80–20 ಅಂಕ ಮಾದರಿಯ ವಿವಿಧ ಕಾನೂನು ಕೋರ್ಸುಗಳಲ್ಲಿ ವಿದ್ಯಾರ್ಥಿಯು ಎಲ್ಲ ವಿಷಯಗಳಲ್ಲಿ ತೇರ್ಗಡೆ ಹೊಂದಿ, ಕೇವಲ ಒಂದು ವಿಷಯದಲ್ಲಿ ಮಾತ್ರ ಕನಿಷ್ಠ ತೇರ್ಗಡೆಗೆ ಅಗತ್ಯವಾದ 32 ಅಂಕಗಳನ್ನು ಪಡೆಯದೇ ಫೇಲ್ ಆಗಿರುವ ವಿದ್ಯಾರ್ಥಿಗಳಿಗೆ **"ಗ್ರೇಸ್ ಮಾರ್ಕ್ಸ್ ಆರ್ಡಿನನ್ಸ್"** ಪ್ರಕಾರ ಗರಿಷ್ಠ ಮೂರು ಕೃಪಾಂಕವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ಆದಕಾರಣ, ಉಲ್ಲೇಖಿತ ಪತ್ರ 01ರ ಅಂಶಗಳಿಗೆ ಪೂರಕವಾಗಿ ವಿದ್ಯಾವಿಷಯಕ ಮಂಡಳಿಯ ತೀರ್ಮಾನವನ್ನು ಗಮನದಲ್ಲಿರಿಸಿಕೊಂಡು ಫಲಿತಾಂಶವನ್ನು ಪ್ರಕಟಿಸಲು ತೀರ್ಮಾನಿಸಲಾಗಿರುತ್ತದೆ. ಈ ಸುತ್ತೋಲೆಯ ಅಂಶಗಳನ್ನು ವಿಶ್ವವಿದ್ಯಾಲಯದಲ್ಲಿ 80–20 ಅಂಕ ಮಾದರಿಯ ಕೋರ್ಸುಗಳು ಪ್ರಾರಂಭವಾದ ವರ್ಷಗಳಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿರುತ್ತದೆ. ಈ ವಿಷಯವನ್ನು ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತರಲಾಗಿದೆ.

**ಕುಲಸಚಿವರು**

**ಗೆ,**

**ವಿಶ್ವವಿದ್ಯಾಲಯದ ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳ ಪಾಚಾರ್ಯರುಗಳಿಗೆ.**

**ಪ್ರತಿಯನ್ನು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ಕ.ರಾ.ಕಾ.ವಿ., ಹುಬ್ಬಳ್ಳಿ
2. ಆಪ್ತ ಕಾರ್ಯದರ್ಶಿ, ಮಾನ್ಯ ಕುಲಸಚಿವರ (ಮೌಲ್ಯಮಾಪನ) ಕಾರ್ಯಾಲಯ, ಕ.ರಾ.ಕಾ.ವಿ., ಹುಬ್ಬಳ್ಳಿ
3. ಉಪಕುಲಸಚಿವರು, ಕರಾಕಾವಿ, ಹುಬ್ಬಳ್ಳಿ
4. ಐ.ಸಿ.ಟಿ. ವಿಭಾಗ, ಮುಂದಿನ ಸೂಕ್ತ ಕ್ರಮಕ್ಕಾಗಿ.